ದಿನಾಂಕಃ **27.10.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

ಮುಂದುವರೆದ ಪಾಟೀಸವಾಲುಃ 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ ಬಿ ವಕೀಲರಿಂದಃ

ಐಟಂ ನಂಃ5 ಕ್ಕೆ ಸರ್ವೆ ನಂಃ 21/102 ಕ್ಕೆ ಸಂಬಂಧಪಟ್ಟಂತೆ ನಾವೆಲ್ಲಾ ಸೇರಿ ಒಟ್ಟು ಕುಟುಂಬದಲ್ಲಿ ಸದರಿ ಜಮೀನನ್ನು ವ್ಯವಸಾಯ ಮಾಡುತ್ತಿದ್ದೇವೆ ಎಂದು ಹೇಳಿ ನಾನು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ರೂಃ 535–00 ಹಣವನ್ನು ನನ್ನ ತಂದೆಯವರು ಒಟ್ಟು ಕುಟುಂಬದ ಎಲ್ಲಾ ಸದಸ್ಯರ ಪರವಾಗಿ ಪಾವತಿ ಮಾಡಿರುತ್ತಾರೆ. ಸದರಿ ರಶೀದಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ, ನಾನು ಹಾಜರುಪಡಿಸುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. 1991–92 ರಲ್ಲಿ ತಹಸೀಲ್ದಾರ್ ರವರ ಆದೇಶದ ಮೇರೆಗೆ ಒಟ್ಟು 6 ಜನರಿಗೆ ಜಮೀನನ್ನು ಗ್ರ್ಯಾಂಟ್ ಮಾಡಲಾಗಿರುತ್ತದೆ, ಸದರಿಯವರಲ್ಲಿ ಪುಟ್ಟಗೌರಮ್ಮ ಮಾತ್ರ ಗೊತ್ತು ಮಿಕ್ಕಿದ್ದವರು ಗೊತ್ತಿಲ್ಲ ಸದರಿ ಸರ್ವೆ ನಂಬರಿನಲ್ಲಿ ಒಟ್ಟು ಐದು ಜನರಿಗೆ ತಹಸೀಲ್ದಾರ್ ರವರು ಮಂಜೂರಾತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಅವರ ಹೆಸರುಗಳು 1. ಮಹದೇವಮ್ಮ, 2 ಸಿ ರಾಜಣ್ಣ, 3. ಚನ್ನನಾಯಕ, 4. ಸಗಾಯ್ ದಾಸ್, 5 ನೇಯವರು ಪುಟ್ಟಗೌರಮ್ಮ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಸದರಿ ಪುಟ್ಟಗೌರಮ್ಮ ರವರು ತಮ್ಮ ತಂದೆಯ ಮನೆಯಿಂದ ಕೊಟ್ಟಿದ್ದತಹ ರೂಃ 535–00 ಗಳ ಹಣವನ್ನು ಸದರಿ ಜಮೀನಿಗೆ ಪಾವತಿ

ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸದರಿ ರೂಃ 535-00 ಗಳನ್ನು ನನ್ನ ತಂದೆಯವರು ಒಟ್ಟು ಕುಟುಂಬದ ಆದಾಯದಿಂದ ಬಂದಂತಹ ಹಣದಿಂದ ಪಾವತಿ ಮಾಡಿರುತ್ತಾರೆ. ಆ ರೀತಿ ನನ್ನ ತಂದೆಯವರು ಬುಗರ್ ಹುಕುಂ ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ಆರ್ ಟಿ ಸಿ ಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ಸದರಿ ಪುಟ್ಟಗೌರಮ್ಮ ರವರು 1990 ರಲ್ಲಿ ಸರ್ವೆ ನಂಃ 21/102 ರಲ್ಲಿ ತಾನು 1990 ರ ಹಿಂದೆ 25 ವರ್ಷಗಳ ಹಿಂದಿನಿಂದ ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಘೋಷಣೆ ಮಾಡಿದ್ದರು ಎಂದರೆ ಸರಿಯಲ್ಲ.

ನಾನು ಹುಟ್ಟಿದ್ದು ದಿಃ 09.10.1985. ಸದರಿ ಪುಟ್ಟಗೌರಮ್ಮ ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದ ಸಮಯದಲ್ಲಿ ಹಾಗೂ ಅರ್ಜಿ ಸಲ್ಲಿಸಿದ ಸಮಯದಲ್ಲಿ ನಾನು ಹುಟ್ಟಿರಲಿಲ್ಲ ಎಂದರೇ ಸರಿಯಲ್ಲ, ಅವರು ವ್ಯವಸಾಯ ಮಾಡುತ್ತಿದ್ದಾಗ ನಾನು ಹುಟ್ಟಿದ್ದೆ ಎನ್ನುತ್ತಾರೆ. ನನ್ನ ತಂದೆಯವರು ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ.

ದಿಃ 03.10.1997 ರಲ್ಲಿ ಪುಟ್ಟಗೌರಮ್ಮ ರವರು ತಹಸೀಲ್ದಾರ್ ರವರಿಗೆ ಸಾಗುವಳಿ ಚೀಟಿ ನೀಡುವಂತೆ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿ ಇದ್ದಾಗ ನನ್ನ ತಂದೆಯವರು ನನ್ನ ದೊಡ್ಡಮ್ಮನವರ ಹೆಸರಿನಲ್ಲಿ ಸದರಿ ಅರ್ಜಿಯನ್ನು ಕೊಡಿಸಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ದಿಃ 15.07.1999 ರಲ್ಲಿ ಪುಟ್ಟಗೌರಮ್ಮ ರವರು ಸದರಿ ಜಮೀನಿಗೆ ಸಂಬಂಧಿಸಿದ ಹಣ ಮತ್ತು ಟಿ ಟಿ ಫೈನ್ ನ್ನು

ಪಾವತಿ ಮಾಡಿರುತ್ತಾರೆ ಎಂದರೆ ನನ್ನ ತಂದೆಯವರು ಒಟ್ಟು ಕುಟುಂಬದಲ್ಲಿ ಇದ್ದಾಗ ಅದನ್ನು ಪಾವತಿ ಮಾಡಿದ್ದರು ಎಂದು ಸಾಕ್ಷಿ ಹೇಳುತ್ತಾರೆ.

ದಿಃ 16.07.1999 ರಂದು ಪುಟ್ಟಗೌರಮ್ಮ ರವರಿಗೆ ತಹಸೀಲ್ದಾರ್ ರವರು ಸಾಗುವಳಿ ಚೀಟಿ ನೀಡಿರುತ್ತಾರೆ ಎಂದರೆ ಸರಿ. ಸದರಿ ಸಾಗುವಳಿ ಆಧಾರದ ಮೇಲೆ ಪುಟ್ಟಗೌರಮ್ಮ ರವರಿಗೆ ಎಂ ಆರ್ ನಂಃ 03/1999-2000 ಆಧಾರದ ಮೇಲೆ ಸಾಗುವಳಿ ಚೀಟಿ ನೀಡಿರುತ್ತಾರೆ ಎಂದರೆ ಸರಿ. ದಿಃ 12.12.1999 ರವರೆಗೆ ಸದರಿ ಸಿದ್ದಯ್ಯ ರವರು ತೀರಿಹೋಗುವ ಸಮಯದವರೆವಿಗೂ ಕೂಡಾ ಅವರು ಸದರಿ ಜಮೀನಿನಲ್ಲಿ ಯಾವುದೇ ಹಕ್ಕನ್ನು ಅವರಾಗಲೀ ಮತ್ತು ನಾನಾಗಲೀ ಕೇಳಿರುವುದಿಲ್ಲ ಎಂದರೆ 1 ನೇ ಪ್ರತಿವಾದಿಯು ತಾನೇ ಎಲ್ಲಾ ಓಡಾಡಿ ನೋಡಿಕೊಳ್ಳುತ್ತೇನೆ ಎಂದು ಹೇಳಿದ ಭರವಸೆಯ ಮೇರೆಗೆ ನಾವು ಅದನ್ನು ಪ್ರಶ್ನೆ ಮಾಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ದಿಃ 11.10.2014 ರಂದು ಪುಟ್ಟಗೌರಮ್ಮ ರವರು ತೀರಿಹೋದ ನಂತರ ಸದರಿ ಜಮೀನಿಗೆ ಸಂಬಂಧಪಟ್ಟ ಖಾತೆ ಅವರ ಮಕ್ಕಳಾದ ಪ್ರತಿವಾದಿಯರ ಹೆಸರಿಗೆ ಜಂಟಿ ಖಾತೆ ಆಗಿರುತ್ತದೆ ಎಂದರೆ 2 ನೇ ಪ್ರತಿವಾದಿ ತಾನು ಎಲ್ಲಾ ನಿಂತು ಮಾಡಿಸುತ್ತೇನೆ ಎಂದು ಹೇಳಿ ನಮಗೆ ಮೋಸ ಮಾಡಿ ಸದರಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

ನಾವು ಸಿದ್ದಯ್ಯರವರ ಮಕ್ಕಳು ಆಗದೇ ಇದ್ದುದ್ದರಿಂದ ನಮಗೆ ಪುಟ್ಟಗೌರಮ್ಮ ರವರ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು, ಹಿತಾಸಕ್ತಿ, ಅಧಿಕಾರ, ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಶಿವಮ್ಮ ಇವರಿಗೆ ಶಿರೀನಹುಂಡಿ ಗ್ರಾಮದ ಶಿಮಮಾದಯ್ಯ ರವರಿಗೆ ಕೊಟ್ಟು ಮದುವೆ ಮಾಡಲಾಗಿರುತ್ತದೆ ಎಂದರೆ ಸರಿ. ಮದುವೆಯಾದ ದಿನದಿಂದ ಸದರಿಯವರು ತನ್ನ ಗಂಡನ ಮನೆಯಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿಯಲ್ಲ, ಅವರು ಎಲಚನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಎಲಚನಹಳ್ಳಿ ಗ್ರಾಮದಲ್ಲಿ 1 ನೇ ಪ್ರತಿವಾದಿ ಶಿವಮ್ಮ ವಾಸವಾಗಿದ್ದರು ಎಂದು ತೋರಿಸಲು ದಾಖಲಾತಿ ಕೊಟ್ಟಿಲ್ಲ, ಆದರೆ ನಾವು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದವು ಎಂದು ಸಾಕ್ಷಿ ಹೇಳುತ್ತಾರೆ. ನನ್ನ ವಾದಪತ್ರದಲ್ಲಿ ಸದರಿ ಶಿವಮ್ಮ 1 ನೇ ಪ್ರತಿವಾದಿಯವರು  ನಮ್ಮ ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದು ನಾನು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ವಿಚಾರಣೆಯ ಸಮಯದಲ್ಲಿ ನಮ್ಮ ಮನೆಯ ವ್ಯವಹಾರವನ್ನು 2 ನೇ ಪ್ರತಿವಾದಿ ಮಾಡುತ್ತಿದ್ದರು ಎಂದು ನಾನು ಒಂದಕ್ಕೊಂದು ತಾಳೆ ಇಲ್ಲದಂತಹ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಜಮೀನುಗಳನ್ನು ಮಾರಾಟ ಮಾಡಬೇಕೆಂಬ ಸಂಚಿನ ಬಗ್ಗೆ ನನಗೆ ತಿಳಿದುಬಂತು ಎಂದು ನಾನು ಹೇಳಿದ್ದು, ಯಾರಿಗೆ ಜಮೀನುಗಳನ್ನು ಮಾರಾಟ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಯಾರಿಗೆ ಎಂದು ಗೊತ್ತಿಲ್ಲ, ಆದರೆ ಕೇವಲ ಮಾರಾಟ ಮಾಡುತ್ತಿದ್ದಾರೆ ಎಂಬ ವಿಷಯ ನನಗೆ ಗೊತ್ತಾಯಿತು ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿಯರು ಮಾರೆಮಾಚಿ ಖಾತೆ ಬದಲಾಹಿಸಿಕೊಂಡಿರುತ್ತಾರೆ ಎಂಬುದರ ಬಗ್ಗೆ ನಾನು ಯಾವುದೇ ರೆವಿನ್ಯೂ ಕಛೇರಿಯಲ್ಲಿ  ಅಪೀಲನ್ನು ಸಲ್ಲಿಸಿರುವುದಿಲ್ಲ.

1 ನೇ ಪ್ರತಿವಾದಿ ಲೆಕ್ಕಪತ್ರ ಇಟ್ಟುಕೊಳ್ಳುತ್ತಿಲ್ಲ ಜಮೀನಿನಲ್ಲಿ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ ಎಂದು ಕೇಳಿ ನಾನು ವಕೀಲರ ಮೂಲಕ ಯಾವುದೇ ನೋಟೀಸ್ ನೀಡಿರುವುದಿಲ್ಲ.

ನನ್ನ ತಾಯಿಯ ಮದುವೆ ದಿಃ 21.06.1976 ರಲ್ಲಿ ಆಗಿರುತ್ತದೆ. ನನ್ನ ತಾಯಿಯ ತಂದೆಯ ಹೆಸರು ಮೋಟಯ್ಯ. ನನ್ನ ತಾಯಿಗೆ 4 ಜನ ಸಹೋದರಿಯರು ಮತ್ತು ಇಬ್ಬರು ಸಹೋದರರರು. 1. ಸಣ್ಣಮ್ಮ, 2. ಚಿಕ್ಕಮಲಗಮ್ಮ, 3. ನಿಂಗಮ್ಮ ಅಂದರೆ ನನ್ನ ತಾಯಿ, 4. ದೊಡ್ಡಮಣಿ (ಪೌತಿ), 5. ಪುಟ್ಟಮ್ಮ, 6.ಚಿಕ್ಕಮಣಿ, 7. ಮರಮ್ಮ. ನನ್ನ ತಾಯಿಯ ಲಗ್ನಪತ್ರಿಕೆಯನ್ನು ಮಾಡಿಸಿದ್ದು ಆದರೆ ಸುಮಾರು ವರ್ಷಗಳಾಗಿರುವುದರಿಂದ ಅದು ನಶಿಸಿಹೋಗಿರುತ್ತದೆ. ಲಗ್ನಕಟ್ಟಿಸಿದ ಪುರೋಹಿತರು ನಮ್ಮ ಊರಿನ ರಾಚಯ್ಯ. ಅವರು ಕೂಡಾ ಈಗ ತೀರಿಕೊಂಡಿರುತ್ತಾರೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ರಾಚಯ್ಯನವರ ಹೆಂಡತಿ ಮಕ್ಕಳು ಇದ್ದಾರೆ. ರಾಚಯ್ಯನವರ ಹೆಂಡತಿ, ಮಕ್ಕಳನ್ನು ಈ ದಾವೆಯಲ್ಲಿ ಸಾಕ್ಷಿದಾರರನ್ನಾಗಿ ಸಾಕ್ಷಿ ನುಡಿಸಲು ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸದರಿಯವರ ಹೆಂಡತಿಗೆ ತುಂಬಾ ವಯಸ್ಸಾಹಿರುವುದರಿಂದ ಅವರನ್ನು ಕರೆದುಕೊಂಡು ಬರಲು ಆಗುವುದಿಲ್ಲ, ಅವರ ಮಕ್ಕಳ ಪೈಕಿ ಒಬ್ಬರು ತೀರಿಹೋಗಿದ್ದು ಉಳಿದ ಇಬ್ಬರು ಇದ್ದಾರೆ, ಅವರಿಗೆ ಬೇಕಾದರೆ ಸಾಕ್ಷಿ ಮಾಡಿಸುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ಸಾಮಾನ್ಯವಾಗಿ ಹೆಣ್ಣಿನ ಊರಿನ ಪುರೋಹಿತರನ್ನು ಮದುವೆಯ ಸಮಯದಲ್ಲಿ ಕರೆಸುತ್ತಾರೆ ಎಂದರೆ ಸದರಿ ರಾಚಯ್ಯರವರು ನಮ್ಮ ತಂದೆಯವರಿಗೂ ಕೂಡಾ ಪರಿಚಯ ಇದುದ್ದರಿಂದ ಅವರಿಗೆ ಕರೆಸಿ ಪುರೋಹಿತ ಕೆಲಸಕ್ಕೆ ನೇಮಿಸಲಾಗಿತ್ತು

ಎಂದು ಸಾಕ್ಷಿ ಹೇಳುತ್ತಾರೆ. ಆ ಸಮಯದಲ್ಲಿ ನಾನು ಹುಟ್ಟಿರಲಿಲ್ಲ ಈ ವಿಷಯ ನನಗೆ ಹೇಗೆ ಗೊತ್ತಾಯಿತು ಎಂಬ ಪ್ರಶ್ನೆಗೆ ನನ್ನ ತಂದೆಯವರು ಈ ವಿಷಯ ನನಗೆ ತಿಳಿಸಿದರು ಎಂದು ಹೇಳುತ್ತಾರೆ.

ನನ್ನ ತಾಯಿಯ ಲಗ್ನಕ್ಕೆ ಹೆಣ್ಣು ಮತ್ತು ಗಂಡಿನವರ ಕಡೆಯಿಂದ 5 – 6 ಜನರು ಸೇರಿದ್ದರು. ಮೈಸೂರಿನಲ್ಲಿ ಲಗ್ನ ಕಟ್ಟಿಸಿದ್ದು, ಮೈಸೂರಿನಲ್ಲಿ ಎಲ್ಲಿ ಎಂಬ ಪ್ರಶ್ನೆಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆ ಸಮಯದಲ್ಲಿ ಯಾವುದೇ ಭಾವಚಿತ್ರವನ್ನು ತೆಗೆಯಲು ಆಗಲಿಲ್ಲ. ಅದೇ ಸಮಯದಲ್ಲಿ ಮಾತುಕತೆ ಕೂಡಾ ಆಗಿ ಎಂಗೇಜ್ ಮೆಂಟ್ ಕೂಡಾ ಆಯಿತು. ಸದರಿ ಎಂಗೇಜ್ ಮೆಂಟ್ ಮುಗುತನಹಳ್ಳಿಯಲ್ಲಿಯೇ ಆಗಿರುತ್ತದೆ. ದಿನಾಂಕ, ತಿಂಗಳು, ವರ್ಷ ಗೊತ್ತಿಲ್ಲ. ಸದರಿ ಎಂಗೇಜ್ ಮೆಂಟ್ ಗೆ ಒಟ್ಟು ಕುಟುಂಬದ ಸದಸ್ಯರು, ಗ್ರಾಮಸ್ಥರು ಹೋಗಿದ್ದರು. ಒಟ್ಟು ಕುಟುಂಬದವರು ಎಂದರೆ ನನ್ನ ಚಿಕ್ಕಪ್ಪನವರು, ನಮ್ಮ ಮಾವಂದಿರು ಹಾಗೂ ಗ್ರಾಮಸ್ಥರು ಹೋಗಿದ್ದರು. ನನ್ನ ಚಿಕ್ಕಪ್ಪಂದಿರು ಎಂದರೆ ನನ್ನ ತಂದೆಯ ಸಹೋದರರು. ದೊಡ್ಡಸಿದ್ದಯ್ಯ ಮತ್ತು ಕುಳ್ಳಬೋರಯ್ಯ. ನಮ್ಮ ಅತ್ತೆ ಸಿದ್ದಮ್ಮ, ನನ್ನ ಮಾವನವರಾದ ಚಲುವಯ್ಯ ನವರು ಹಾಗೂ ಊರಿನ ಗ್ರಾಮಸ್ಥರು ಹೋಗಿದ್ದರು. ಸಿದ್ದಯ್ಯನವರ ತಂದೆ ತಾಯಿ ಹೋಗಿದ್ದರಾ ಎಂಬ ಪ್ರಶ್ನೆಗೆ ಅವರು ಕೂಡಾ ಹೋಗಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಆ ಸಮಯದಲ್ಲಿ ನನ್ನ ತಂದೆಗೆ ಯಾವುದೇ ವರದಕ್ಷಿಣೆ ಕೊಟ್ಟಿರುವುದಿಲ್ಲ.

ನನ್ನ ತಾಯಿಯ ಮದುವೆಯು ಜ್ಯೋತಿ ನಗರದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಆಗಿರುತ್ತದೆ. ದೇವಸ್ಥಾನದಲ್ಲಿ ಮದುವೆಯಾದರೆ ದಾಖಲಾತಿಗಳನ್ನು

ಇಟ್ಟಿರುತ್ತಾರೆ ಎಂದರೆ ಸದರಿ ದೇವಸ್ಥಾನದಲ್ಲಿ ದಾಖಲಾತಿ ಇರಬಹುದು ಇರುತ್ತವೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ದೇವಸ್ಥಾನದಲಕ್ಲಿ ಪುರೋಹಿತಿಕ್ಕೆಯನ್ನು ಯಾರು ವಹಿಸಿದ್ದರು ಎಂದರೆ ಸಾಕ್ಷಿ ರಾಚಯ್ಯನವರು ಎಂದು ಹೇಳುತ್ತಾರೆ. ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮದುವೆಯಾಯಿತು ಎಂಬ ಪ್ರಶ್ನೆಗೆ ಬೆಳಿಗ್ಗೆ 10 ಗಂಟೆಯಿಂದ 10.30 ಗಂಟೆಯವರೆಗೆ ಮದುವೆಯಾಯಿತು ಎಂದು ಸಾಕ್ಷಿ ಹೇಳುತ್ತಾರೆ. ಆ ಸಂದರ್ಭದಲ್ಲಿ ಹುಡುಗ ಹುಡುಗಿ ಕಡೆಯಿಂದ 40 ರಿಂದ 50 ಜನ ಸೇರಿದ್ದರು. ಸದರಿ ಮದುವೆಗೆ ಬಂದ ಆಮಂತ್ರಿತರಲ್ಲಿ ನಮ್ಮ ಅತ್ತೆ ಸಿದ್ದಮ್ಮ ಮತ್ತು ನನ್ನ ಚಿಕ್ಕಪ್ಪಂದಿರು ಜೀವಂತವಾಗಿದ್ದಾರೆ. ಆ ಸಮಯದಲ್ಲಿ ಉಪಸ್ಥಿತರಿದ್ದ ಗ್ರಾಮಸ್ಥರೆಲ್ಲಾರೂ ಪೌತಿಯಾಗಿದ್ದಾರೆ. ನನ್ನ ತಾಯಿಯ ಗ್ರಾಮದ ಗ್ರಾಮಸ್ಥರು ಮದುವೆಗೆ ಬಂದಿದ್ದು ಕೆಲವರು ಇನ್ನೂ ಬದುಕಿದ್ದಾರೆ. ಅವರನ್ನು ಕರೆದುಕೊಂಡು ಬಂದು ಸಾಕ್ಷಿ ಹೇಳಿಸುತ್ತೇನೆ.ಆಂಜನೇಯಸ್ವಾಮಿ ದೇವಸ್ಥಾನದ ದಾಖಲಾತಿಯನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಆಗಿನ ಕಾಲದಲ್ಲಿ ಅದನ್ನು ನಮೂದು ಮಾಡಿರುತ್ತಾರೂ ಇಲ್ಲವೂ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಸ್ತುತ ದಾವೆಗೋಸ್ಕರ ನನ್ನ ತಾಯಿ ಸಿದ್ದಯ್ಯನವರ 2 ನೇ ಹೆಂಡತಿ ಎಂದು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯ ಸಾಕ್ಷಿದಾರರಾದ ಎಸ್ ಸಿದ್ದಲಿಂಗಸ್ವಾಮಿ ಬಿನ್ ಲೇಟ್ ಚಿಕ್ಕಯ್ಯ ಇವರು ನನ್ನ ಭಾವನಾಗಬೇಕು. ಎಸ್ ಸಿದ್ದಲಿಂಗಸ್ವಾಮಿ ರವರ ಮಗಳ ಹೆಸರು

ಪೂರ್ಣಿಮಾ ಎಂದರೆ ಸರಿ. ಅವರ ಮಗಳನ್ನು ನನ್ನ ಅಣ್ಣ ಎಸ್ ರವಿ ಇವರಿಗೆ ಮದುವೆ ಮಾಡಿಕೊಟ್ಟಿದ್ದೆ ಎಂದರೆ ಸರಿ. ಸಿದ್ದಲಿಂಗಸ್ವಾಮಿ ರವರ ಹೆಂಡತಿಯ ಹೆಸರು ಶಿವಕುಮಾರಿ ಎಂದರೆ ಸರಿ. ಅವರು ನನ್ನ ದೊಡ್ಡಪ್ಪನ ಮಗಳು ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಶಿವಕುಮಾರಿ ರವರ ತಂದೆಯ ಹೆಸರು ಸಿದ್ದಯ್ಯ ಎಂದರೆ ಸರಿ, ವಿ.ಸಿದ್ದಯ್ಯ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಸಿದ್ದಯ್ಯ ರವರ ಅಕ್ಕನ ಹೆಸರು ಬೋರಮ್ಮ ಎಂದರೆ ಸರಿ. ಅವರು ಪೌತಿಯಾಗಿರುತ್ತಾರೆ ಎಂದು ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಬೋರಮ್ಮ ರವರ ಮಗನ ಹೆಸರು ಮಹದೇವಯ್ಯ ಎಂದರೆ ಸರಿ. ಮಹದೇವಯ್ಯನ ಮಗಳು ಪಾರ್ವತಿ ಇವರನ್ನು 2 ನೇ ವಾದಿ ರೇವಣ್ಣ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

ಸಿದ್ದಯ್ಯನ ತಮ್ಮನ ಹೆಸರು ಚಿಕ್ಕಬೈರಯ್ಯ ಎಂದರೆ ಸರಿ. ಸಿದ್ದಯ್ಯನವರು ಮೈಸೂರು ಜಿಲ್ಲಾ ಸಶಸ್ತ್ರ ಮೀಸಲು ಪಡೆಯಲು ಮುಖ್ಯ ಪೇದೆಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಜ್ಯೋತಿ ನಗರದ ಪೋಲೀಸ್ ಕ್ವಾಟ್ರಸ್ ನಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಸಿದ್ದಯ್ಯನವರಿಗೆ ಹಾಗೂ ನನ್ನ ತಾಯಿಗೆ ಸಂಬಂ ಇತ್ತು ಎಂದರೆ ಸರಿಯಲ್ಲ. ಮದುವೆ ಮುಂಚೆ ಸಂಬಂಧ ಇರಲಿಲ್ಲ ಮದುವೆಯ ನಂತರ ಸಂಬಂಧ ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ಈ ರೀತಿ ಸಂಬಂಧ ಇದುದ್ದರಿಂದಲೇ ನಾನು ಮತ್ತು ನನ್ನ ಸಹೋದರರು ಜ್ಯೋತಿನಗರದಲ್ಲಿಯೇ ಇದ್ದುಕೊಂಡು ವ್ಯಾಸಂಗ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಐಟಂ ನಂಃ 4 ಸರ್ವೆ ನಂಃ 18 ಉತ್ತರ ದಿಕ್ಕಿನಲ್ಲಿ ಸಿದ್ದಯ್ಯನವರ ಬಾಬ್ತು ಎಲಚನಹಳ್ಳಿ ಗ್ರಾಮದ ಸರ್ವೆ ನಂಃ 16/1 ರಲ್ಲಿ 6 ಎಕರೆ 16 ಗುಂಟೆ ಜಮೀನು ಇದೆ

ಎಂದರೆ ಸರಿ. ಸಿದ್ದಯ್ಯ ಈಗ ಪೌತಿಯಾಗಿರುತ್ತಾರೆ ಎಂದರೆ ಸರಿ. ತನ್ನ ಹೆಂಡತಿಯ ಜಮೀನಿನಲ್ಲಿ ಆಸ್ತಿ ಕೊಡಬೇಕಾಗುತ್ತದೆ ಎಂದು ಹೇಳಿ ಸಿದ್ದಲಿಂಗಸ್ವಾಮಿ ರವರು ಸಿದ್ದಯ್ಯನವರ ಹೆಸರನ್ನು ದುರುಪಯೋಗಪಡಿಸಿಕೊಂಡು ನಮ್ಮ ಮುಖಾಂತರ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಿದ್ದಲಿಂಗಸ್ವಾಮಿ ಕೂಡಾ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರ ಮೇಲೆ ಕಲಂ 307 ಐ ಪಿ ಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಮಾನ್ಯ ಶೀಘ್ರಗತಿ ನ್ಯಾಯಾಲಯ, ಮೈಸೂರು ಶಿಕ್ಷೆ ವಿಧಿಸಿರುತ್ತದೆ ಎಂದರೆ ಸರಿ. ಅವರು ಸಲ್ಲಿಸಿದ ಅಪೀಲು ಕೂಡಾ ವಜಾ ಆಗಿರುತ್ತದೆ ಎಂದರೆ ಸರಿ. ಅವರು ಸರ್ವೋಚ್ಚ ನ್ಯಾಯಾಲಯದಲ್ಲೂ ಕೂಡಾ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಅವರಿಗೆ ಐದೂವರೆ ವರ್ಷ ಕಠಿಣ ಶಿಕ್ಷೆ ವಿಧಿಸಿರುತ್ತದೆ ಎಂದರೆ ಸರಿ. ಸದರಿ ವ್ಯಕ್ತಿ ಅಪರಾಧಿಕ ವ್ಯಕ್ತಿತ್ವ ಹೊಂದಿದ್ದರಿಂದ ಒಳಸಂಚು ಮಾಡಿ ದಾವಾ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನಮ್ಮಗಳ ಮುಖಾಂತರ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳಿಗೆ ಕುಳ್ಳಬೋರಯ್ಯ ಮತ್ತು ಸಿದ್ದಮ್ಮ ಸೋದರತ್ತೆ ಮತ್ತು ಚಿಕ್ಕಪ್ಪ ಆಗಬೇಕು ಎಂದರೆ ನಮಗೂ ಕೂಡಾ ಚಿಕ್ಕಪ್ಪ ಹಾಗೂ ಸೋದರತ್ತೆ ಆಗಬೇಕು ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿಯರು ಕುಳ್ಳಬೋರಯ್ಯ ಮತ್ತು ಸಿದ್ದಮ್ಮ ಇವರ ವಿರುದ್ದ ದಾವೆ ಸಲ್ಲಿಸಿದ್ದು ಅದು ಪ್ರತಿವಾದಿಯರ ಪರ ಆಗಿರುತ್ತದೆ ಎಂದರೆ ಸರಿ.

ಕುಳ್ಳಬೋರಯ್ಯ, ಸಿದ್ದಮ್ಮ ಮತ್ತು ದೊಡ್ಡಸಿದ್ದಯ್ಯ ಹಾಗೂ ಅವರ ವಂಶಿಕರೂ ಒಳಸಂಚು ನಡೆಸಿ ನಮ್ಮ ಪರವಾಗಿ ದಾವೆ ಸಲ್ಲಿಸುವಂತೆ ಮಾಡಿರುತ್ತಾರೆ ಎಂದರೆ

ಓ ಎಸ್ ನಂಃ 101/2019 ಪಿಡಬ್ಲ್ಯು.1

ಸರಿಯಲ್ಲ. ನಾನು ದಾವ ಆಸ್ತಿಗಳಲ್ಲಿ ಯಾವುದೇ ಪಾಲು ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಮತ್ತು ಪ್ರತಿವಾದಿಗಳಿಗೆ ನಾವು ಅಪರಿಚಿತರು ಎಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬಸ್ಥರು ಅಣ್ಣತಮ್ಮಂದಿರು ಎಂದು ಸಾಕ್ಷಿ ಹೇಳುತ್ತಾರೆ. ನಮಗೆ ಮತ್ತು ಪ್ರತಿವಾದಿಗಳಿಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡಾ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸಂಬಂಧ ಹುಟ್ಟಿಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.

ಓ ಎಸ್ ನಂಃ 101/2019 ಪಿಡಬ್ಲ್ಯು.1